ಮಿಲಿಟೆರಿ ಇಲಾಖೆ.

ನಂ. 321. ತಾರೀಖು 12ನೇ ಡಿಸಂಬರ್ 1876.

ಹರ್ ಮೆಜಸ್ಟೀಯವರ ಫಾಜುಗಳ ವಿಷಯದಲ್ಲಿ ಇಂಡ್ಯ ಗವರ್ಮೆಂಟಿನವರು ಕೊಟ್ಟ ಹುಕ್ಕುಂ ಅನುಸರಿಸಿ ಚೀಫ್ ಕಮ್ಮಿಷನರವರು ಅಪ್ಪಣೇ ಕೊಡುವದೇನಂದರೆ.—ಬರುವ ಜನವರೀ 1ನೇ ತಾರೀಖಿನಲ್ಲಿ ಮೈಸೂರು ಸವಾರ್ ಬಾರ್ ಫಾಜುಗಳ ಸ್ ಕಮ್ಮಿಷನೆಡ್ ಆಫಿಸರ್‌ಗಳಿಗೂ, ಸೋಜರ್ ಗಳಿಗೂ, ಮುಹಾರಾಣಿಯವರು, ತಮ್ಮ ಖಿತಾಬ್‌ಗಳಿಗೆ ಹೆಚ್ಚಳಿಕೆಯನ್ನು ವಹಿಸುವ ವಿಷಯವು ಪ್ರಕಟಪಡಿಸಲ್ಪಡುವ ಸಮಯದ ಜ್ಞಾಪಕಾರ್ಥವಾಗಿ, ಒಂದು ದಿನದ ತಲಬ್ ಇನಾಂ ಕೊಡಲ್ಪಡುವದು.

ಮಿಲಿಟೇರಿ ಡಿಪಾರ್ಟ್‌ಮೆಂಟ್
ಲೆಟರ್ಸ್ ನಂಬರ್ 1133—1186.
ತಾರೀಖು 24ನೇ ನವಂಬರ್ 1876.

"ಬಮೋಜೀಬ್ ಹುಕ್ಕುಂ,"

T. CLARKE,
Offg. Secretary

ಕೊಡಗು ಚೀಫ್ ಕಮ್ಮಿಷನರವರಿಂದ ಕೊಡೋಣಾದ ಇಸ್ತಿಹಾರ್ ನಾಮೆಗಳು.

ಜನರಲ್.

ಇಸ್ತಿಹಾರ್ ನಾಮೆ.

ನಂ. 12. ತಾರೀಖು 18ನೇ ನವಂಬರ್ 1876.

ಇದರಲ್ಲಿ ಮುಂದೆ ವಿಧಿಸಲ್ಪಡುವ ಷರತ್‌ಗಳಿಗೆ ಒಳಪಟ್ಟು ಸ್ ೧೮೭೭ನೇ ಇಸವೀ ಏಪ್ರಿಲ್ ಗುರ್ರೇ ತಾರೀಖು ಲಗಾಯತು 1880ನೇ ಮಾರ್ಚೀ 31ನೇ ಮಾರ್ಚಿಂವರಿಗೆ ಕೊಡಗು ಸೀಮೆಯಲ್ಲಿ ಷರಾಬ್ ತಯಾರೀ ವ ಬಿಕ್ರೀ ಈ ವಿಷಯಗಳ ಸಂಪೂರ್ಣಸ್ವಾತಂತ್ರ್ಯವೆನ್ನು ಪಡೆಯುವ ಬಗ್ಗೆ ಇದರಿಂದ ದರಖಾಸ್ತುಗಳು ಅಪೇಕ್ಷಿಸಲ್ಪಡುತ್ತವೆ.ಸದರೀ ಸ್ವಾತಂತ್ರ್ಯದಲ್ಲಿ ಕೇಂದಿ, ಯಾ ಯೂರೋಪಿಯರ್ ವೈನ್‌ಗಳು ವ ಸ್ಪಿರಿಟ್ ಸಾರಾಯಿಗಳು, ಯಾ ಬಿಯರ್‌ಗಳು ಯಿವುಗಳ ಬಿಕ್ರಿ ಯಾ ಬಿಯರ್‌ಗಳ ತಯಾರಿ ಯಿಂತಾವು ಅಡಗಿರುವದಿಲ್ಲವು.

II. ದರಖಾಸ್ತುದಾರುಗಳು ತಮಿಗೆ ಮೇಲೆ ವಿವರಿಸಲ್ಪಟ್ಟ ಸಂಪೂರ್ಣವಾದ ಸ್ವಾಂತಂತ್ರ್ಯ ಕೊಡಲ್ಪಟ್ಟಲ್ಲಿ ಅವರು ಸರಕಾರ್‌ಕ್ಕೆ ಗ್ಯಾರೆಂಟಿ ಯಾ ಭರವಸೆ ಕೊಡುವ ಮಿನಿವಂ ಯಾನೆ ಕಮ್ಮಿ ಹುಟ್ಟುವಳಿಯನ್ನು ದರಖಾಸ್ತಿನಲ್ಲಿ ತಿಳಿಯ ಪಡಿಸತಕ್ಕದ್ದಲ್ಲದೆ ಕಮ್ಮಿ ವೊಡಂಬಡಿಕೆಯನ್ನು ನೆರವೇರಿಸತಕ್ಕ ಬಗ್ಗೆ ತಾವು ಕೊಡಲು ಸಿದ್ಧವಾಗಿರುವ ಜಾಮೀನ್ ಸಹ ತಿಳಿಸತಕ್ಕದ್ದು.

III. ಪ್ರತಿ ದರಖಾಸ್ತಿನ ಸಂಗಡ 1000 ರೂಪಾಯಿ ನಗದಾಗಲಿ ಗವರ್ಮೆಂಟ್ ಸಿಕ್ಯುರಿಟಿಗಳ ಮೂಲಕವಾಗಲಿ ಠೇವಣಿ ಕಳುಹಿಸತಕ್ಕದ್ದು. ಸದರೀ ದರಖಾಸ್ತನ್ನು ಪೊಂದು ಲಿಪಾಫೇಯಲ್ಲಿ ಬಂದು ಮೂಡಿ ಅದರ ಮೇಲೆ "ಆರಕ್ ಸಾರಾಯಿಯನ್ನು ಮಾಡುವ ಬಗ್ಗೆ ಬಿಕರೀ ಮಾಡುವ ಬಗ್ಗೆ ಸಂಪೂರ್ಣವಾದ ಸ್ವಾತಂತ್ರ್ಯಕ್ಕೋಸ್ಕರ ಮಾಡಲ್ಪಟ್ಟ ದರಖಾಸ್ತು" ಯಂಬದಾಗಿ ಬರದು ಅದನ್ನು ಕೊಡಗು ಸೂಪರ್‌ಟಿಂಡೆಂಟರವರಿಗೆ 1877ನೇ ಇಸವಿ ಜನವರೀ 15ನೇ ತಾರೀಖಿನಲ್ಲಾಗಲಿ, ತತ್ಪೂರ್ವವಾಗಲಿ ತಲಪುವಂತೆ ಕಳುಹಿಸತಕ್ಕದ್ದು. ಸದರೀ ತಾರೀಖು ತರುವಾಯ ಬರುವ ಯಾವ ದರಖಾಸ್ತುಗಳಿ ಅಂಗೀಕರಿಸಲ್ಪಡುವದಿಲ್ಲ. ದರಖಾಸ್ತುಗಳನ್ನು ಸೂಪರ್‌ಟೆಂಡೆಂಟರವರು ತಮ್ಮ ಆಫಿಸಿನಲ್ಲಿ 1877ನೇ ಜನವರೀ 16ನೇ ತಾರೀಖಿನ ದಿವಿ 12 ಘಂಟೆಗೆ ಅಕಾಲದಲ್ಲಿ ಹಾಜರಿರುವದಕ್ಕೆ ಅಪೇಕ್ಷಿಸುವಕೆಲ್ಲರ ರುಬರೂ ಖುಲ್ಲಾ ಮಾಡುವರು. ದರಖಾಸ್ತುಗಳ ಅಖೈರು ವ್ಯವಸ್ಥೆ ಚೀಫ್ ಕಮ್ಮಿಷನರವರನ್ನು ಹೊಂದಿದ್ದಾಗಿರುತ್ತಾದ್ದರಿಂದ ಅವರು ಯಾವ ದರಖಾಸ್ತನ್ನಾಗಲಿ ಅಂಗೀಕರಿಸಲಿಕ್ಕೆ ಅಥವಾ ಸರಿಯಾದ ಮೊಬಲಗಿಗೆ ಸವಾಲ್